**ಕರ್ನಾಟಕ ಸರ್ಕಾರದ ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 13.07.2017 ಮಧ್ಯಾಹ್ನ 3.30 ಗಂಟೆಗೆ, ವಿಧಾನ ಸೌಧದ 3ನೇ ಮಹಡಿಯ, ಸಮ್ಮೇಳನ ಸಭಾಂಗಣ ಕೊಠಡಿ ಸಂಖ್ಯೆ:334ರಲ್ಲಿ ನಡೆದ 14ನೇ ರಾಜ್ಯ ಮಟ್ಟದ ಪ್ರಧಾನ ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಭೆಯ ನಡವಳಿ.**

**ಸಭೆಯ ಅಧ್ಯಕ್ಷತೆ:-**

ಡಾ|| ಸುಭಾಷ್ ಸಿ. ಖುಂಟಿಆ ಭಾ.ಆ.ಸೇ
ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ ಮತ್ತು
ಅಧ್ಯಕ್ಷರು, ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ರಾಜ್ಯ ಮಟ್ಟದ ಸಮಿತಿ,

**ಹಾಜರಾದ ಸದಸ್ಯರು:-**

**ಅಧಿಕಾರಿ ಸದಸ್ಯರು, ಕರ್ನಾಟಕ ಸರ್ಕಾರ**

ಅಪರ ಮುಖ್ಯ ಕಾರ್ಯದರ್ಶಿಗಳು, ಗೃಹ ಇಲಾಖೆ.
ಪ್ರಧಾನ ಕಾರ್ಯದರ್ಶಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ,
ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆರವರ ಪ್ರತಿನಿಧಿಗಳು
ಕಾರ್ಯದರ್ಶಿ, ಅಲ್ಪಸಂಖ್ಯಾತ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ.
ಪ್ರಧಾನ ವ್ಯವಸ್ಥಾಪಕರು, ರಾಜ್ಯ ಮಟ್ಟದ ಬ್ಯಾಂಕರ್ಸ್ ಸಮಿತಿ, ಬೆಂಗಳೂರು (ಸಿಂಡಿಕೇಟ್ ಬ್ಯಾಂಕ್)
ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, (ಎನ್.ಆರ್.ಎಲ್.ಎಂ), ಆರ್.ಡಿ.ಪಿ.ಆರ್.
ನಿರ್ದೇಶಕರು, ಸರ್ವ ಶಿಕ್ಷಣ ಅಭಿಯಾನ
ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ
ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ.
ನಿರ್ದೇಶಕರು, ಯೋಜನೆ ಮತ್ತು ಸಾಂಖ್ಯಿಕ ಇಲಾಖೆ.
ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
ನಿರ್ದೇಶಕರು, ಅಲ್ಪಸಂಖ್ಯಾತರ ನಿರ್ದೇಶನಾಲಯ.
ಮಿಷನ್ ನಿರ್ದೇಶಕರು, ಸಂಜೀವಿನಿ, ಕೆ.ಎಸ್.ಆರ್.ಎಲ್.ಪಿ.ಎಸ್.
ನಿರ್ದೇಶಕರು, ಉರ್ದು ಮತ್ತು ಇತರ ಭಾಷಾ ಅಲ್ಪಸಂಖ್ಯಾತರ ನಿದೇಶನಾಲಯ, ಬೆಂಗಳೂರು
ವ್ಯವಸ್ಥಾಪಕ ನಿರ್ದೇಶಕರು, ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮರವರ ಪ್ರತಿನಿಧಿಗಳು
ವ್ಯವಸ್ಥಾಪಕ ನಿರ್ದೇಶಕರು, ದೇವರಾಜು ಅರಸು ಭವನ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ,
ಅಪರ ಪ್ರಧಾನ ವ್ಯವಸ್ಥಾಪಕರು, ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ ನಿಗಮ
ತಾಂತ್ರಿಕ ನಿರ್ದೇಶಕರು ಕೆ.ಎಸ್.ಡಿ.ಬಿ, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ.
ಜಂಟಿ ನಿರ್ದೇಶಕರು, (ಯೋಜನ) ನಗರಾಭಿವೃದ್ಧಿ ಇಲಾಖೆ.
ಜಂಟಿ ನಿರ್ದೇಶಕರು, ಆರ್ಥಿಕ ಮತ್ತು ಸಾಂಖ್ಯಿಕ ಇಲಾಖೆ.
ಉಪ ಕಾರ್ಯದರ್ಶಿಗಳು, ಸಿಬ್ಬಂದಿ ಆಡಳಿತ ಸುಧಾರಣೆ ಇಲಾಖೆ, ವಿಧಾನ ಸೌಧ.
ಉಪ ಕಾರ್ಯದರ್ಶಿ, ಕಾರ್ಮಿಕ ಇಲಾಖೆ,
ಜಿಲ್ಲಾ ಅಧಿಕಾರಿ, ಅಲ್ಪಸಂಖ್ಯಾತ ಕಲ್ಯಾಣ ಇಲಾಖೆ (ಎಂ.ಎಸ್.ಡಿ.ಪಿ ಜಿಲ್ಲೆಗಳು) ಬಳ್ಳಾರಿ, ರಾಯಚೂರು, ಕೊಪ್ಪಳ, ಹಾವೇರಿ, ಬೀದರ್, ಬಾಗಲಕೋಟೆ ಮತ್ತು ಯಾದಗಿರಿ ಜಿಲ್ಲೆ, ಜಿಲ್ಲಾಧಿಕಾರಿ ಪರವಾಗಿ.
ಕಾರ್ಯದರ್ಶಿ, ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ.

**ಅಧಿಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು:-**

**ಹಾಜರಿದ್ದವರು:-**

1. Federation of Masjid, Madrasa and Wakf Institutions, Indiranagar, Bangalore – 38
2. Ideal Education Society, Gubbi Colony, Sedam Road Extension, Gulbarga.
3. Consortium of Minorities Association, Belgaum

**ನಾಮ ನಿರ್ದೇಶಿತ ಸದಸ್ಯರು:-**

**ಹಾಜರಿದ್ದವರು:-**

ಶ್ರೀ ಮಹಮ್ಮದ್ ಅಸ್ಗರ್ ಚುಲ್‌ಬುಲ್, ಗುಲ್ಬರ್ಗ.

ಶ್ರೀ ಪ್ರೋ ಎಂ.ಸುರೇಶ್ ಜೈನ್, ಮೈಸೂರು.

ಶ್ರೀ ಎಂ.ಎ ಬಾಸಿತ್, ಸಮಾಲೋಚಕರು, ಯೋಜನಾ ಇಲಾಖೆ, ಬೆಂಗಳೂರು.

**ಅಧಿಕಾರೇತರ ಸದಸ್ಯರು:- (ಜಿಲ್ಲಾ ಪಂಚಾಯತ್ ಕ್ಷೇತ್ರ)**

**ಹಾಜರಿದ್ದವರು:-**

ಶ್ರೀ ಮೆಲ್ವಿನ್ ಡಿಸೋಜ, ಮಂಗಳೂರು.

ಶ್ರೀ ಜಾಫರ್ ಅಲಿ ಪಟೇಲ್, ರಾಯಚೂರು.

ಶ್ರೀಮತಿ ಆಬಿಧಾಬಿ ಇಸ್ಮಾಯಿಲ್ ಸಾಬ್ ನದಾಫ್, ಹಾವೇರಿ.

**ಗೈರು ಹಾಜರಾದ ಚುನಾಯಿತ ಪ್ರತಿನಿಧಿಗಳು:-**

ಶ್ರೀ ಪರ್ವತಗೌಡ ಚಂದನಗೌಡ ಗದ್ದಿಗೌಡರ್, ಲೋಕಸಭಾ ಸದಸ್ಯರು, ಬಾಗಲಕೋಟೆ.

ಶ್ರೀ ಸಂಗಣ್ಣ ಅಮರಪ್ಪ ಕರಡಿ, ಲೋಕಸಭಾ ಸದಸ್ಯರು, ಕೊಪ್ಪಳ.

ಶ್ರೀ ಬಿ, ರಾಮುಲು, ಲೋಕಸಭಾ ಸದಸ್ಯರು, ಬಳ್ಳಾರಿ.

ಶ್ರೀ ಭಗವಂತ ಖೂಬ, ಲೋಕಸಭಾ ಸದಸ್ಯರು, ಬೀದರ್.

ಶ್ರೀ ಮಲ್ಲಿಕಾರ್ಜುನ ಖರ್ಗೆ, ಲೋಕಸಭಾ ಸದಸ್ಯರು, ಗುಲ್ಬರ್ಗ,

ಶ್ರೀ ಬಿ.ವಿನಾಯಕ್, ಲೋಕಸಭಾ ಸದಸ್ಯರು, ರಾಯಚೂರು.

ಶ್ರೀ ಶಿವಕುಮಾರ್ ಚನ್ನಬಸಪ್ಪ ಉದಾಸಿ, ಲೋಕಸಭಾ ಸದಸ್ಯರು, ಹಾವೇರಿ.

ಶ್ರೀ ಇಕ್ಬಾಲ್ ಅನ್ಸಾರಿ, ಶಾಸಕರು, ಗಂಗಾವತಿ, ಕೊಪ್ಪಳ ಜಿಲ್ಲೆ.

**ಗೈರು ಹಾಜರಾದ ಅಧಿಕಾರಿ ಸದಸ್ಯರು:-**

ಪ್ರಧಾನ ಕಾರ್ಯದರ್ಶಿಗಳು, ಕಂದಾಯ ಇಲಾಖೆ, ಬೆಂಗಳೂರು.

ಆಯುಕ್ತರು, ಹಿಂದುಳಿದ ವರ್ಗಗಳ ಇಲಾಖೆ, ಬೆಂಗಳೂರು.

ಆಯುಕ್ತರು, ಕರ್ನಾಟಕ ಕೊಳಚೆ ಅಭಿವೃದ್ಧಿ ಮಂಡಳಿ, ಬೆಂಗಳೂರು.

ಹಿರಿಯ ನಿರ್ದೇಶಕರು, ಯೋಜನಾ ಇಲಾಖೆ, ಬೆಂಗಳೂರು.

ಕಾರ್ಯದರ್ಶಿ, ಹಿಂದುಳಿದ ವರ್ಗಗಳ ಆಯೋಗ, ಬೆಂಗಳೂರು.

ಕೇಂದ್ರ ಅಲ್ಪಸಂಖ್ಯಾತರ ಮಂತ್ರಾಲಯದ ಪ್ರತಿನಿಧಿ, ನವದೆಹಲಿ.

ಕಾರ್ಯದರ್ಶಿಗಳು ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ, ಇವರು ಸರ್ಕಾರದ ಮುಖ್ಯ ಕಾರ್ಯದರ್ಶಿಗಳು ಹಾಗೂ ಸಭೆಯಲ್ಲಿ ಹಾಜರಿದ್ದ ಪ್ರಧಾನ ಕಾರ್ಯದರ್ಶಿಗಳು, ಕಾರ್ಯದರ್ಶಿಗಳು, ನಿರ್ದೇಶಕರುಗಳು ಹಾಗೂ ಇಲಾಖಾ ಅಧಿಕಾರಿಗಳನ್ನು ಮತ್ತು ರಾಜ್ಯ ಮಟ್ಟದ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದ ಪ್ರಗತಿ ಪರಿಶೀಲನಾ ಸಮಿತಿಯ ಅಧಿಕಾರೇತರ ಸದಸ್ಯರನ್ನು ಸ್ವಾಗತಿಸುತ್ತಾ, ಮಾನ್ಯ ಮುಖ್ಯ ಕಾರ್ಯದರ್ಶಿಗಳನ್ನು ಸಭೆಯ ಪ್ರಗತಿ ಪರಿಶೀಲನೆಯನ್ನು ನಡೆಸಿಕೊಡಲು ಕೋರಿದರು.

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಕಳೆದ ಸಭೆಯ ವಿಷಯಗಳಿಗೆ ಸಂಬಂಧಿಸಿದಂತೆ ಅನುಪಾಲನಾ ವರದಿ ಹಾಗೂ ಪ್ರಗತಿ ವರದಿಗಳನ್ನು ಎಲ್ಲಾ ಇಲಾಖೆಗಳಿಂದ ಸ್ವೀಕೃತವಾಗಿರುತ್ತೆಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಗಮನಕ್ಕೆ ತಂದರು.

## I. ದಿನಾಂಕ: 18.11.2016ರ ಸಭೆಯ ನಡವಳಿಗಳ ಅನುಪಾಲನೆ:

### A. ಶಿಕ್ಷಣಕ್ಕಾಗಿ ಅವಕಾಶಗಳನ್ನು ಹೆಚ್ಚಿಸುವುದು:

**i. ಐ.ಸಿ.ಡಿ.ಎಸ್ ಸೇವೆಗಳು ಸರಿ-ಸಮಾನಾಗಿ ಲಭ್ಯವಿರುವಂತೆ ಮಾಡುವುದು. (ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ) ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿ ಅಂಗನವಾಡಿ ಕೇಂದ್ರ ತೆರೆಯುವ ಬಗ್ಗೆ**

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಿಂದ ಬಂದಿರುವ ವರದಿಯಂತೆ ಒಟ್ಟು 1393 ಅಂಗನವಾಡಿ ಕೇಂದ್ರಗಳು ಕೇಂದ್ರ ಸರ್ಕಾರದಿಂದ ಮಂಜೂರಾಗಿದ್ದು, ಅದರಲ್ಲಿ 505 ಕೇಂದ್ರಗಳು ಅಲ್ಪಸಂಖ್ಯಾತರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಪ್ರಾರಂಭಿಸಲು ಕ್ರಮ ಕೈಗೊಳ್ಳಲಾಗಿದ್ದು, 392 ಕೇಂದ್ರಗಳಲ್ಲಿ ಅಂಗನವಾಡಿ ಕಾರ್ಯಕರ್ತೆಯರ ವ್ಯವಸ್ಥೆ ಮಾಡಿರುವ ಬಗ್ಗೆ ಇಲಾಖೆಯಿಂದ ಮಾಹಿತಿ ನೀಡಲಾಗಿದೆ ಎಂದು ತಿಳಿಸಿದರು. ಉಳಿದ ಅಂಗನವಾಡಿ ಕಾರ್ಯಕರ್ತೆಯರ ನೇಮಕಾತಿ ಬಗ್ಗೆ ಕಾರ್ಯದರ್ಶಿಗಳು ವಿಚಾರಿಸಿದಾಗ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರ್ದೇಶಕರು ಸದರಿ ಅಂಗನವಾಡಿ ಕೇಂದ್ರಗಳ ಮಾಹಿತಿಯು 2015-16ನೇ ಸಾಲಿಗೆ ಸಂಬಂದಪಟ್ಟಿದ್ದು, ಜಿಲ್ಲೆಯ ಉಪ ನಿರ್ದೇಶಕರು ಅಲ್ಪಸಂಖ್ಯಾತ ಜನ ಸಂಖ್ಯೆಯು ಶೇ.25 ರಷ್ಟು ಇರುವಂತಹ ಜಾಗಗಳನ್ನು ಗುರುತಿಸಿದ ಸಮಯದಲ್ಲಿ 392 ಸ್ಥಳಗಳು ಅರ್ಹತೆ ಹೊಂದಿರುವುದರಿಂದ ಆ ಪ್ರದೇಶಗಳಲ್ಲಿ ಕೇಂದ್ರಗಳು ಪ್ರಾರಂಭಗೊಂಡಿದೆ ಎಂದು ತಿಳಿಸಿದರು. ಅರ್ಹತೆಗಳನ್ನು ಪರಿಗಣಿಸಿ ಅಂಗನವಾಡಿ ಕೇಂದ್ರಗಳನ್ನು ಪ್ರಾರಂಭಿಸಿದ್ದಲ್ಲಿ ಸರಿ ಇರುವುದಾಗಿ ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

**ii. ಶಾಲಾ ಶಿಕ್ಷಣಗಳ ಲಭ್ಯತೆಗಳನ್ನು ಹೆಚ್ಚಿಸುವುದು : ಉರ್ದು ಶಿಕ್ಷಕರ ನೇಮಕಾತಿ:**

ಪ್ರೌಢ ಶಾಲೆಗಳಲ್ಲಿ 88 ಹುದ್ದೆಗಳು ಖಾಲಿ ಇದ್ದು ಅದರಲ್ಲಿ 47 ಹುದ್ದೆಗಳು ಭರ್ತಿ ಮಾಡಲಾಗಿರುತ್ತದೆ ಹಾಗೂ 41 ಹುದ್ದೆಗಳು ಖಾಲಿ ಇರುವುದಾಗಿ ತಿಳಿಸಿ ಅಪರ ಮುಖ್ಯ ಕಾರ್ಯದರ್ಶಿಗಳು, ಶಿಕ್ಷಣ ಇಲಾಖೆ ರವರು ಪ್ರಸ್ತುತ ಖಾಲಿ ಇರುವ ಹುದ್ದೆಗಳಿಗೆ ಅತಿಥಿ ಶಿಕ್ಷಕರನ್ನು ನೇಮಿಸುತ್ತಿರುವುದಲ್ಲದೇ ಅಗತ್ಯ ವಿದ್ಯಾರ್ಹತೆ ಹೊಂದಿರುವಂತಹ ಪ್ರಾಥಮಿಕ ಶಾಲ ಶಿಕ್ಷಕರನ್ನು ಪ್ರೌಢ ಶಾಲೆಗಳಲ್ಲಿ ಬೋಧಿಸಲು ನೇಮಿಸಲಾಗುತ್ತಿದೆ ಎಂದು ತಿಳಿಸಿದರು. ಇಲಾಖೆಯ ಹಳೇ ಸಿ & ಆರ್ ನಿಯಮಾವಳಿಗಳಲ್ಲಿ ತಪ್ಪುಗಳು ಇದ್ದುದರಿಂದ 2016-17ನೇ ಸಾಲಿನಲ್ಲಿ ಹೊಸ ಸಿ & ಆರ್ ನಿಯಮಾವಳಿಯನ್ನು ಸಿದ್ದಪಡಿಸಲಾಗಿದ್ದು, ಅದರಂತೆ ಪ್ರಸ್ತುತ ವರ್ಷದಲ್ಲಿ 41 ಖಾಲಿ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಾಲಾಗಿದೆ ಎಂದು ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರು ತಿಳಿಸಿದರು. ಸದರಿ ಹುದ್ದೆಗಳನ್ನು ಅಕ್ಟೋಬರ್-2017ನೇ ಅಂತ್ಯದೊಳಗಾಗಿ ನೇಮಿಸುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು.

**iii. ಎಸ್.ಪಿ.ಕ್ಯೂ.ಇ.ಎಂ, SPQEM:**

ಹಿಂದಿನ ಸಭೆಯಲ್ಲಿ ಎಸ್.ಪಿ.ಕ್ಯೂ.ಇ.ಎಂ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಅನುದಾನ ಬಿಡುಗಡೆ ವಿಳಂಬವಾಗುತ್ತಿದ್ದು, ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ಹಾಗೂ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳು ಕೇಂದ್ರ ಸರ್ಕಾರದೊಂದಿಗೆ ಈ ವಿಷಯದ ಬಗ್ಗೆ ಚರ್ಚಿಸಲು ನಿರ್ಧರಿಸಲಾಗಿತ್ತು. ಸದರಿ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಈವರೆಗೂ ಅನುದಾನ ಬಿಡುಗಡೆಯಾಗದಿರುವ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ವಿಚಾರಿಸಿದರು.

ಅಪರ ಮುಖ್ಯ ಕಾರ್ಯದರ್ಶಿಗಳು ಶಿಕ್ಷಣ ಇಲಾಖೆ ರವರು ಉತ್ತಾರಿಸುತ್ತಾ, 14 ಶಾಲೆಗಳ ಡಿ.ವೈ.ಎಸ್. DIS ಕೋಡ್‌ನ ಮಾಹಿತಿಯನ್ನು ಸಲ್ಲಿಸಲಾಗಿದ್ದರೂ ಈವರೆವಿಗೂ ಅನುದಾನ ಬಿಡುಗಡೆ ಮಾಡಲಾಗಿರುವುದಿಲ್ಲ ಎಂದು ತಿಳಿಸಿದರು. ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಾಗಿರುವ ಒಟ್ಟು ಅನುದಾನದ ಬಗ್ಗೆ ಪ್ರಶ್ನಿಸಲಾಗಿ ರೂ. 10.00 ಕೋಟಿ ಯಾಗಿರುವುದರಿಂದ ಆರ್ಥಿಕ ಇಲಾಖೆಯ ಕಾರ್ಯದರ್ಶಿಗಳೂ ಸಹ ಅನುದಾನ ಬಿಡುಗಡೆ ವಿಷಯವನ್ನು ಕೇಂದ್ರ ಸರ್ಕಾರದೊಂದಿಗೆ ತೆಗೆದುಕೊಳ್ಳುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು.

**iv <u>ಮದರಸಾಗಳ ಆಧುನೀಕರಣ:</u>**

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಇಲಾಖಾ ವತಿಯಿಂದ ಹೊಸ ಯೋಜನೆಯು ಅನುಷ್ಠಾನಗೊಳಿಸಲಾಗುತ್ತಿದ್ದು, ಮದರಸಾಗಳಲ್ಲಿ ಔಪಚಾರಿಕ ಶಿಕ್ಷಣದೊಂದಿಗೆ ಕನ್ನಡ ಮತ್ತು ಕಂಪ್ಯೂಟರ್ ತರಬೇತಿಯು ಸಹ ನೀಡುವ ಬಗ್ಗೆ ಜಿಲ್ಲೆಗಳಿಂದ ಹಲವಾರು ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ಇಲಾಖಾ ಮಂತ್ರಿಗಳು ಸದರಿ ಯೋಜನೆಯ ಮಾರ್ಗಸೂಚಿಗಳಲ್ಲಿ ಕೆಲವು ಬದಲಾವಣೆಗಳನ್ನು ಮಾಡಲು ಸೂಚಿಸಿರುತ್ತಾರೆಂದು ತಿಳಿಸುತ್ತಾ (ಮದರಸಾಗಳಿಗೆ ಕಟ್ಟಡ ನಿರ್ಮಾಣ, ಗ್ರಂಥಾಲಯ ಪ್ರಾರಂಭ ಇತ್ಯಾದಿಗಳಿಗೆ **One time grant**ನ್ನು ನೀಡುವಂತೆ) ಈ ಬಗ್ಗೆ ಮಾನ್ಯ ಮಂತ್ರಿರವರೊಂದಿಗೆ ಚರ್ಚಿಸಲಾಗುವುದೆಂದು ಹೇಳಿದರು.

**V <u>ಪ್ರತಿಭಾವಂತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ:</u>**

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಅಲ್ಪಸಂಖ್ಯಾತರಿಗೆ ವಿದ್ಯಾರ್ಥಿ ವೇತನ ಯೋಜನೆಯಡಿ ವಿಳಂಬದ ವಿಷಯ ಬಿಟ್ಟರೇ ಬೇರೆ ಯಾವುದೇ ತೊಂದರೆ ಇರುವುದಿಲ್ಲವೆಂದು ಹೇಳಿದರು.

**B. ಆರ್ಥಿಕ ಮತ್ತು ಉದ್ಯೋಗಾವಕಾಶಗಳಲ್ಲಿ ಸರಿ-ಸಮಾನ ಪಾಲು ದೊರೆಯುವಂತೆ ಖಚಿತ ಪಡಿಸಿಕೊಳ್ಳುವುದು.**

**<u>ಬಡವರಿಗಾಗಿ ಸ್ವಂತ ಉದ್ಯೋಗ ಮತ್ತು ವೇತನ ಉದ್ಯೋಗದ ಕಾರ್ಯಕ್ರಮಗಳು:</u>**

**(1) <u>ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ಯ ಇಲಾಖೆ (ರಾಜೀವ್ ಗಾಂಧಿ ಚೈತನ್ಯ ಯೋಜನೆ)</u>**

ಸದರಿ ಕಾರ್ಯಕ್ರಮದಡಿ ಪ್ರಗತಿಯನ್ನು ಪರಿಶೀಲಿಸುತ್ತಾ ಕೇವಲ 19% ಮಾತ್ರ ಸಾಧಿಸಲಾಗಿದೆ ಎಂದು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ತಿಳಿಸಿದರು. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿ ರವರು ಕಳೆದ ವರ್ಷದಲ್ಲಿ ಅನುದಾನವನ್ನು ರೂ.351 ಕೋಟಿಯಿಂದ ರೂ.176 ಕೋಟಿಗೆ ಇಳಿಕೆಗೊಳಿಸಿರುವುದರಿಂದ ಪ್ರಗತಿಯು ಕುಂಠಿತವಾಗಿದ್ದು, ಪ್ರಸ್ತುತ ವರ್ಷದಲ್ಲಿ ಗುರಿ ಸಾಧಿಸಲು ಕ್ರಮಕೈಗೊಳ್ಳಲಾಗುವುದೆಂದು ಹೇಳಿದರು.

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಇಲಾಖೆಗಳು ಅನುಷ್ಠಾನಗೊಳಿಸುತ್ತಿರುವ ವಿವಿಧ ಯೋಜನೆಗಳಲ್ಲಿ ಒಟ್ಟು ಗುರಿಯ ಪೈಕಿ ಶೇ.15% ಅನ್ನು ಅಲ್ಪಸಂಖ್ಯಾತ ಗುರಿ ಎಂದು ತೋರಿಸುತ್ತಾ ಬಂದಿದ್ದು, ವಾಸ್ತವಿಕವಾಗಿ ಅಲ್ಪಸಂಖ್ಯಾತ ಫಲಾನುಭವಿಗಳಿಗೆ ಸೌಲಭ್ಯಗಳು ದೊರಕಿಸುತ್ತಿರುವ ಬಗ್ಗೆ ಮಾಹಿತಿಯನ್ನು ಅಂತರ್ಜಾಲದಲ್ಲಿ (upload) ಅಳವಡಿಸುವುದು ಅಗತ್ಯವೆಂದು ಹೇಳಿದರು.

ರಾಜೀವ್ ಗಾಂಧಿ ಚೈತನ್ಯ ಯೋಜನೆ ಬಗ್ಗೆ ವಿವರಿಸುತ್ತಾ ಇಲಾಖಾ ನಿರ್ದೇಶಕರು SHGs ಗಳಿಗೆ Revolving Fund & Community Investment Fund ಅನ್ನು ನೀಡಲಾಗುತ್ತಿದ್ದು, 70% ಅಲ್ಪಸಂಖ್ಯಾತ ಮಹಿಳೆಯರು ಇರುವಂತಹ SHGs ಗುಂಪುಗಳಿಗೆ ಒಟ್ಟಾರೆ ಗುರಿಯ ಶೇ.15% ರಷ್ಟು ಸುತ್ತು ನಿಧಿಯನ್ನು ನೀಡಲಾಗುತ್ತಿದೆಂದು ತಿಳಿಸಿದರು. ಅದರಂತೆಯೇ ಮುಂದುವರೆಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

(2) **ಪೌರಾಡಳಿತ ನಿರ್ದೇನಾಲಯ:**

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ನಲ್ಮ್ (NULM-National Urban Livelihood Mission) ಯೋಜನೆಯಲ್ಲಿ ಶೇ.76% ರಷ್ಟು ಗುರಿ ಸಾಧನೆ ಮಾಡಲಾಗಿದ್ದು, ಆದರೆ ಸದರಿ ಇಲಾಖೆಯಲ್ಲಿಯೂ ಸಹ ಒಟ್ಟು ಗುರಿಯ ಶೇ.15 ರಷ್ಟು ಅಲ್ಪಸಂಖ್ಯಾತರ ಸಾಧನೆ ಎಂದು ತೋರಿಸಲಾಗುತ್ತಿದ್ದು, ವಾಸ್ತವಿಕವಾಗಿ ಅಲ್ಪಸಂಖ್ಯಾತರ ಫಲಾನುಭವಿಗಳ ಆಯ್ಕೆ ಬಗ್ಗೆ ಖಚಿತಪಡಿಸಿಕೊಳ್ಳುವುದು ಅಗತ್ಯವೆಂದು ತಿಳಿಸಿದರು.

ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರು ಉತ್ತರಿಸುತ್ತಾ 2016-17ನೇ ಸಾಲಿಗೆ ಆರ್ಥಿಕ ಗುರಿ ರೂ.854 ಕೋಟಿಯಾಗಿದ್ದು, ರೂ.128 ಕೋಟಿಯನ್ನು ಅಲ್ಪಸಂಖ್ಯಾತರಿಗೆ ನಿಗಧಿಪಡಿಸಿ ಅದರಲ್ಲಿ ಶೇ.76% ಅನ್ನು ಸಾಧಿಸಲಾಗಿರುತ್ತದೆ. ಸದರಿ ಯೋಜನೆಯಡಿ ತರಬೇತಿ ಹಾಗೂ Certification ಒಳಗೊಂಡಿದ್ದು, ಇದಕ್ಕಾಗಿ 6 ರಿಂದ 8ತಿಂಗಳ ಅವಧಿ ತಗಲುತ್ತದೆ, ಸಾಧನೆ ಸ್ವಲ್ಪ ಕಡಿಮೆಯಾಗಿದ್ದರೂ ಪ್ರಸ್ತುತ ವರ್ಷದಲ್ಲಿ ಗುರಿಯನ್ನು ಸಾಧಿಸಲಾಗುವುದೆಂದು ತಿಳಿಸಿದರು.

ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೆಪ್ಟಂಬರ್-2017ರ ಒಳಗೆ ಹೆಚ್ಚಿನ ಸಾಧನೆ ಗಳಿಸಬೇಕೆಂದು ತಿಳಿಸಿದರು. ನಿರ್ದೇಶಕರು 2017-18 ನೇ ಸಾಲಿನ ಕ್ರಿಯಾ ಯೋಜನೆಯನ್ನು ಕೇಂದ್ರ ಸರ್ಕಾರ ಹಾಗೂ ರಾಜ್ಯ ಮಟ್ಟದ ಉನ್ನತ ಸಮಿತಿ (State High Level Committee) ಗಳಿಂದ ಅನುಮೋದನೆಗೊಳ್ಳುವ ಕಾರ್ಯವಿಧಾನವನ್ನು ವಿವರಿಸಿದಾಗ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸದರಿ ಅನುಮೋದನೆ ಪಡೆಯುವುದರಲ್ಲಿ ಅರ್ಧ ವರ್ಷ ಕಳೆದು ಹೋಗುತ್ತದೆಂದು ಅಸಮಧಾನ ವ್ಯಕ್ತಪಡಿಸಿದರು.

(3) **ತಾಂತ್ರಿಕ ತರಬೇತಿ ಮೂಲಕ ಕೌಶಲ್ಯ ಅಭಿವೃದ್ಧಿಪಡಿಸುವುದು: (ಉದ್ಯೋಗ ಮತ್ತು ತರಬೇತಿ ಇಲಾಖೆ) ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವ ಪ್ರದೇಶಗಳಲ್ಲಿನ ಐ.ಟಿ.ಐ ಗಳನ್ನು ಮೇಲ್ದರ್ಜೆಗೇರಿಸುವುದು.**

ಹಿಂದಿನ ಸಭೆಯಲ್ಲಿ ಸದರಿ ಇಲಾಖೆಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಅಲ್ಪಸಂಖ್ಯಾತರು ಹೆಚ್ಚಿನ ಸಂಖ್ಯೆಯಲ್ಲಿ ವಾಸಿಸುವ ಹಳ್ಳಿ ಮತ್ತು ತಾಲ್ಲೂಕುಗಳ ಮಾಹಿತಿಯನ್ನೊಳಗೊಂಡ ಜಿ.ಐ.ಎಸ್ ಮ್ಯಾಪ್ ಅನ್ನು ತಯಾರಿಸಲು ನಿರ್ದೇಶನ ನೀಡಿರುವ ಬಗ್ಗೆ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಸಭೆಯ ಗಮನಕ್ಕೆ ತಂದರು. ಸದರಿ ಇಲಾಖೆಯ ಅಧಿಕಾರಿಗಳು ಗೈರು ಹಾಜರಿದ್ದುದರಿಂದ ಮುಂದಿನ ಸಭೆಯೊಳಗೆ ಕ್ರಮಕೈಗೊಂಡು ಅನುಪಾಲನೆ ಸಲ್ಲಿಸಲು ಸೂಚಿಸಲಾಯಿತು.

**ಆರ್ಥಿಕ ಚಟುವಟಿಕೆಗಳಿಗಾಗಿ ಸಾಲ ಬೆಂಬಲವನ್ನು ಹೆಚ್ಚಿಸುವುದು:-**

**ಎಸ್.ಎಲ್.ಬಿ.ಸಿ:**

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಎಸ್.ಎಲ್.ಬಿ.ಸಿ ಕಛೇರಿಯಿಂದ ಕೇವಲ 3 ಜಿಲ್ಲೆಗಳ ಮಾಹಿತಿಯನ್ನು ಸಲ್ಲಿಸಿದ್ದು, ಉಳಿದ ಜಿಲ್ಲೆಗಳ ಮಾಹಿತಿಯನ್ನು ನೀಡಿರುವುದಿಲ್ಲವೆಂದು ಮಾನ್ಯ ಅಧ್ಯಕ್ಷರ ಗಮನಕ್ಕೆ ತಂದರು.

ಲೀಡ್ ಬ್ಯಾಂಕ್ ಅಧ್ಯಕ್ಷರು ಉತ್ತರಿಸುತ್ತಾ Priority Sector lending ಅಡಿಯಲ್ಲಿ ರೂ.2,56,000 ಕೋಟಿಗಳ ಪೈಕಿ ರೂ. 27700 ಕೋಟಿಗಳು ಮಾತ್ರ ಅಂದರೆ ಶೇ.10.82% ಮಾತ್ರ ಸಾಧಿಸಲಾಗಿರುತ್ತೆಂದು ತಿಳಿಸಿದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳ ಸೂಚನೆಯಂತೆ ಸ್ಟೇಟ್ ಲೆವೆಲ್ ಬ್ಯಾಂಕರ್ಸ್ ಸಭೆಗಳಲ್ಲಿ ಈ ವಿಷಯವನ್ನು ಪ್ರತ್ಯೇಕ Agendaವಾಗಿ ತೆಗೆದುಕೊಳ್ಳಲಾಗುತ್ತಿದೆ, ಹಾಗೂ ಲೀಡ್ ಬ್ಯಾಂಕ್‌ನ ಜಿಲ್ಲಾ ವ್ಯವಸ್ಥಾಪಕರುಗಳಿಗೆ ಸದರಿ ವಿಷಯವನ್ನು ಸಭೆಗಳಲ್ಲಿ ಪರಿಶೀಲಿಸಲು ತಿಳಿಸಲಾಗಿರುತ್ತದೆಂದು ಹೇಳಿದರು. ಅಲ್ಲದೇ ಅಲ್ಪಸಂಖ್ಯಾತರು ಹೆಚ್ಚಾಗಿ ಇರುವ ಜಿಲ್ಲೆಗಳಲ್ಲಿ ನಿರ್ಧಿಷ್ಟ ಪರಿಶೀಲನೆಯನ್ನು ಕೈಗೊಳ್ಳುವಂತೆ ಸೂಚಿಸಲಾಗಿದ್ದು ಮುಂದಿನ ಸಭೆಯಲ್ಲಿ ಅಲ್ಪಸಂಖ್ಯಾತರಿಗೆ ನೀಡಲಾಗಿರುವ ಸಾಲ ಸೌಲಭ್ಯಗಳ ಜಿಲ್ಲಾವಾರು ಮಾಹಿತಿಯನ್ನು ಸಲ್ಲಿಸಲಾಗುವುದೆಂದು ಹೇಳಿದರು.

## C. ರಾಜ್ಯ ಮತ್ತು ಕೇಂದ್ರ ಸೇವೆಗಳಿಗಾಗಿ ನೇಮಕಾತಿಗಳು:

ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು 2016-17ನೇ ಸಾಲಿನಲ್ಲಿ ಇಬ್ಬರು All India Civil Services (IAS), ಇಬ್ಬರು Civil Judge ಹುದ್ದೆಗೆ ಹಾಗೂ 12 State Civil Services (KAS)ಗೆ ಆಯ್ಕೆಯಾಗಿರುವ ವಿಷಯವನ್ನು ಮಾನ್ಯ ಮುಖ್ಯ ಕಾರ್ಯದರ್ಶಿಗಳ ಅವಗಾಹನೆಗೆ ತಂದರು .

## D. ಅಲ್ಪಸಂಖ್ಯಾತರ ಜನಜೀವನ ಸುಧಾರಿಸುವ ಬಗ್ಗೆ : ಗ್ರಾಮೀಣ ವಸತಿ ಯೋಜನೆ :-

### 1. ರಾಜೀವ್ ಗಾಂಧಿ ಗ್ರಾಮೀಣ ವಸತಿ ನಿಗಮ ನಿಯಮಿತ:

ಸದರಿ ಇಲಾಖಾ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಇಂದಿರಾ ಅವಾಸ್ ಯೋಜನೆ ಹಾಗೂ ಬಸವ ಯೋಜನೆಯಡಿ ಕ್ರಮವಾಗಿ ಪ್ರಗತಿ ಶೇ.77% ಹಾಗೂ 65% ಸಾಧಿಸಲಾಗಿರುತ್ತದೆಂದು ವಿವರಿಸುತ್ತಾ ಅಡಿಷನಲ್ ಜನರಲ್ ಮ್ಯಾನೇಜರ್ ರವರು ಅಂಕಿ ಅಂಶಗಳನ್ನು ನೀಡಿದರು. ಪಿ.ಎಂ.ಎ.ವೈ, PMAY ಯೋಜನೆಯಡಿ ಗುರಿ 12750, ಹಾಗೂ ಸಾಧನೆ ಕೇವಲ 1440 ಆಗಿದ್ದು, ಈ ಬಗ್ಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಅಸಮಧಾನ ವ್ಯಕ್ತಪಡಿಸಿದರು. ಪ್ರತಿ ತ್ರೈಮಾಸಿಕದ ಪ್ರಗತಿಯನ್ನು ಪರಿಶೀಲಿಸಬೇಕಾಗಿದ್ದು, ಪ್ರಗತಿ ಕುಂಠಿತವಾದ ಪಕ್ಷದಲ್ಲಿ ಮುಂದಿನ ತ್ರೈಮಾಸಿಕದಲ್ಲಿ ಇದನ್ನು ಸುಧಾರಿಸಲು ಅವಕಾಶ ಇರುವುದೆಂದು ಸೂಚಿಸಿದರು.

### 2. ನಗರದ ವಸತಿ ಯೋಜನೆಗಳು:

ಪೌರಾಡಳಿತ ನಿರ್ದೇಶಕರು ಇಲಾಖೆಯು ಮೂರು ಪ್ರಮುಖವಾದ ವಸತಿ ಯೋಜನೆಗಳು ಅನುಷ್ಠಾನಗೊಳಿಸುತ್ತಿದ್ದು, (BSUP, RAY, HFA) ಅವುಗಳ ಬಗ್ಗೆ ವಿವರಿಸುತ್ತಾ ಎಲ್ಲಾ ಯೋಜನೆಗಳು ಪ್ರಗತಿಯಲ್ಲಿದ್ದು, ಗುರಿಯನ್ನು ಸದ್ಯದಲ್ಲೆ ಸಾಧಿಸಲಾಗುವುದೆಂದು ತಿಳಿಸಿದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಎಲ್ಲಾ ಇಲಾಖಾಧಿಕಾರಿಗಳಿಗೆ ಹಿಂದಿನ ಸಭೆಯಲ್ಲಿ ಸೂಚಿಸಿರುವ ವಿವಿಧ ಯೋಜನೆಗಳ 2017-18ನೇ ಸಾಲಿನ ವಾರ್ಷಿಕ ಅಲ್ಪಸಂಖ್ಯಾತ ಗುರಿಯನ್ನು ನಾಲ್ಕು ತ್ರೈಮಾಸಿಕದಲ್ಲಿ ವಿಂಗಡಿಸಿ ಅದರಂತೆ ಪ್ರಗತಿಯನ್ನು ಪರಿಶೀಲಿಸಲಾಗುವುದೆಂದು ತಿಳಿಸುತ್ತಾ ಈ ಕಾರ್ಯವನ್ನು 10 ದಿನದೊಳಗಾಗಿ ಪೂರ್ಣಗೊಳಿಸಿ ಅಂತರ್ಜಾಲದಲ್ಲಿ Upload ಮಾಡಲು ತಿಳಿಸಿದರು.

**ಹಿಂದಿನ ಸಭೆಯಲ್ಲಿ ಚರ್ಚಿಸಲಾದ ಇತರೆ ವಿಷಯಗಳ ಕುರಿತು ಇಲಾಖೆಗಳು ನೀಡಿರುವ ಅನುಪಾಲನೆ:-**

**(a) ಶಾಲೆಯಿಂದ ಹೊರಗುಳಿದ ಮಕ್ಕಳನ್ನು /ಶಾಲೆ ಬಿಟ್ಟ ಮಕ್ಕಳನ್ನು ಮರಳಿ ಶಾಲೆಗೆ ತರುವ ಬಗ್ಗೆ:**

ಶಾಲೆ ಬಿಟ್ಟ ಮಕ್ಕಳು ಹಾಗೂ ಮರಳಿ ಶಾಲೆಗೆ ತಂದ ಮಕ್ಕಳ ವಿವರಗಳನ್ನು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರು ನೀಡಿದರು. (Total 9468 School drop outs ಅದರಲ್ಲಿ 2252 Minorities ಇರುವುದಾಗಿ ಹಾಗೂ 1789 ಮಕ್ಕಳನ್ನು Main Stream ಮಾಡಲಾಗಿದೆ). ಅಂಕಿ ಅಂಶಗಳನ್ನು ಡಿಸೆಂಬರ್-2016ಕ್ಕೆ ಸಂಬಂಧಿಸಿದ್ದು ಪ್ರಸ್ತುತ ವರ್ಷ ಹಾಗೂ ಕಳೆದ ವರ್ಷ ಸೇರಿದಂತೆ ಒಟ್ಟು 17005 ಮಕ್ಕಳು ಶಾಲೆಯಿಂದ ಬಿಟ್ಟಿರುವವರೆಂದು (School drop outs) ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಸಭೆಯ ಗಮನಕ್ಕೆ ತಂದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಒಟ್ಟು School drop outsಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಹಾಗೂ ಅಲ್ಪಸಂಖ್ಯಾತ ಮಕ್ಕಳ ಸಂಖ್ಯೆಯನ್ನು ನಮೂದಿಸಿ ಇದನ್ನು ಗುರಿಯನ್ನಾಗಿ ತೆಗೆದುಕೊಂಡು ಶೈಕ್ಷಣಿಕ ವರ್ಷ ಪ್ರಾರಂಭವಾಗಿ ಕೆಲವು ದಿನಗಳಾಗಿರುವುದರಿಂದ ಸದರಿ ಮಕ್ಕಳನ್ನು ಮರಳಿ ಶಾಲೆಗೆ ತರಲು ತಕ್ಷಣ ಕ್ರಮಕೈಗೊಳ್ಳುವಂತೆ ಹಾಗೂ ಈ ಮಕ್ಕಳು ದೀರ್ಘಕಾಲ ಶಾಲೆಯಿಂದ ಉಳಿದವರಾಗಿದ್ದರೇ ಇವರಿಗೆ Bridge Course ಗಳನ್ನು ಆರಂಭಿಸಿ ನಂತರ ಶಾಲೆಗೆ ತರಲು ಕ್ರಮ ಕೈಗೊಳ್ಳುವಂತೆ ತಿಳಿಸಿದರು.

**(b) ಪ್ರಾಥಮಿಕ ಶಾಲೆಗಳ ಉನ್ನತಿಕರಣ:**

77 ಉರ್ದು ಪ್ರಾಥಮಿಕ ಶಾಲೆಗಳನ್ನು ಪೌಢ ಶಾಲೆಗಳನ್ನಾಗಿ ಉನ್ನತಿಕರೀಸುವ ಬಗ್ಗೆ ಮುಂದಿನ ಸಭೆಯಲ್ಲಿ ಪ್ರಗತಿಯನ್ನು ಸೂಚಿಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

**(c) ಉರ್ದು ಶಾಲೆಗಳ ದುರಸ್ಥಿ ಬಗ್ಗೆ:**

2015-16ನೇ ಸಾಲಿನ ಸರ್ವ ಶಿಕ್ಷಣ ಅಭಿಯಾನ ಯೋಜನೆಯಡಿ ರಾಜ್ಯದ 43 ಸರ್ಕಾರಿ ಉರ್ದು ಪ್ರಾಥಮಿಕ ಶಾಲಾ ಕೊಠಡಿಗಳ ದುರಸ್ತಿಗಾಗಿ ಜಿಲ್ಲಾ ಪಂಚಾಯತ್ ಇಂಜಿನಿಯರಿಂಗ್ ವಿಭಾಗಕ್ಕೆ ಅನುದಾನವನ್ನು ಬಿಡುಗಡೆ ಮಾಡಲಾಗಿದ್ದು, ಕಾಮಗಾರಿಗಳು ಪ್ರಗತಿಯಲ್ಲಿರುತ್ತದೆಂದು ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರು ಸಭಾ ಅಧ್ಯಕ್ಷರ ಗಮನಕ್ಕೆ ತಂದರು. ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ರೂ.30 ಕೋಟಿಗಳನ್ನು ಉರ್ದು ಶಾಲೆಗಳ ದುರಸ್ತಿಗಾಗಿ ನೀಡಲಾಗಿದ್ದು, ಈ ಬಗ್ಗೆ ಆಯುಕ್ತರು ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಂದ ವರದಿ ಬಂದಿಲ್ಲವೆಂದು ಹೇಳಿದರು. ಸದರಿ ಮಾಹಿತಿಯನ್ನು ಮುಂದಿನ ಸಭೆಯಲ್ಲಿ ಒದಗಿಸಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

**(d) ಅಲ್ಪಸಂಖ್ಯಾತರ ಯುವಕ/ಯುವತಿಯರಿಗೆ ಕೌಶಲ್ಯ ಅಭಿವೃದ್ಧಿ ತರಬೇತಿ:-**

ಕೌಶಲ್ಯ ಅಭಿವೃದ್ಧಿ ತರಬೇತಿಗಾಗಿ ಪ್ರತ್ಯೇಕ ಇಲಾಖಾ ಪ್ರಾರಂಭಗೊಂಡಿದ್ದು, ಸದರಿ ಇಲಾಖೆಯ ಸಮಿತಿಯಲ್ಲಿ ಅಲ್ಪಸಂಖ್ಯಾತ ಇಲಾಖೆಯ ಪ್ರಾತಿನಿಧ್ಯ ಅಗತ್ಯವೆಂದು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಹೇಳಿದರು. ಈ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸುವಂತೆ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

**(e) ಪ್ರಧಾನ ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮದಡಿ ಜಿಲ್ಲಾಮಟ್ಟದ ಸಮಿತಿಗಳ ರಚನೆ ಬಗ್ಗೆ:-**

ಗುಲಬರ್ಗಾ, ಬಾಗಲಕೋಟೆ ಹಾಗೂ ಕೊಪ್ಪಳ ಜಿಲ್ಲೆಗಳು ಜಿಲ್ಲಾ ಸಮಿತಿಯನ್ನು ರಚಿಸದೇ ಇರುವ ಬಗ್ಗೆ ಮುಖ್ಯ ಕಾರ್ಯದರ್ಶಿಗಳ ಅಸಮಧಾನ ವ್ಯಕ್ತಪಡಿಸುತ್ತಾ ಒಂದು ವಾರದೊಳಗಾಗಿ ಸದರಿ ಸಮಿತಿ ರಚಿಸಿ ಅಧಿಕಾರೇತರ ಪಟ್ಟಿಯನ್ನು ಲಭ್ಯವಿಲ್ಲದಿದ್ದಲ್ಲಿ ಅವರನ್ನು ಹೊರತುಪಡಿಸಿ ಸಮಿತಿಯನ್ನು ರಚನೆ ಮಾಡಿ ಜುಲೈ-2017ರ ಅಂತ್ಯದೊಳಗಾಗಿ ಸಮಿತಿಯ ಮೊದಲನೆ ಸಭೆಯನ್ನು ನಡೆಸುವಂತೆ ಸೂಚನೆ ನೀಡಿದರು.

## II. 2016-17 ನೆ ಸಾಲಿನ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ:

1. ಇಲಾಖೆಗಳ ಪ್ರಗತಿಯನ್ನು ಪರಿಶಿಲಿಸುತ್ತಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯು ಶೇ.92%; ಶಿಕ್ಷಣ ಇಲಾಖೆಯ ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಲ್ಲಿ ಶೇ.101% ಪ್ರಗತಿಯಾಗಿರುವ ಬಗ್ಗೆ ಕಾರ್ಯದರ್ಶಿಗಳ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ರವರು ಸಭೆಯ ಗಮನಕ್ಕೆ ತಂದರು.

2. ಉರ್ದು ಶಾಲೆಗಳ ದುರಸ್ತಿ ಕಾರ್ಯದ ಬಗ್ಗೆ ಹಿಂದಿನ ಮೂರು ಸಭೆಗಳಿಂದ ಅದೇ ಅಂಕಿ ಅಂಶಗಳನ್ನು ನೀಡಲಾಗಿದ್ದು, ಪ್ರಗತಿಯ ಬಗ್ಗೆ ಹಾಗೂ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ವರದಿ ನೀಡಬೇಕಾಗಿ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ತಿಳಿಸಲಾಯಿತು.

3. **ವಿದ್ಯಾರ್ಥಿ ವೇತನ ಕಾರ್ಯಕ್ರಮ:**
   ಫಲಾನುಭವಿಗಳಿಗೆ ವಿದ್ಯಾರ್ಥಿ ವೇತನ ಜಮಾ ಆಗದಿರುವ ಬಗ್ಗೆ ದೂರುಗಳು ಬರುತ್ತಿದ್ದು, ಕೇಂದ್ರ ಸರ್ಕಾರದಿಂದ ಬಿಡುಗಡೆಯಾಗಬೇಕಾದ ಅನುದಾನ ಒಟ್ಟಾರೆ ಎಲ್ಲಾ ರಾಜ್ಯಗಳಿಗೆ ಒಂದೇ ಭಾರಿ ನೀಡುವ ವಿಧಾನ ಅನುಸರಿಸಲಾಗುತ್ತಿದ್ದು, ವಿಳಂಬಕ್ಕೆ ಇದೇ ಮುಖ್ಯವಾದ ಕಾರಣವಾಗಿರುವುದರಿಂದ ಮಾನ್ಯ ಮುಖ್ಯ ಕಾರ್ಯದರ್ಶಿ ರವರಿಂದ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯುವಂತೆ ನಿರ್ಧರಿಸಲಾಯಿತು.

4. **ಮೌಲಾನಾ ಆಜಾದ್ ಪೌಂಡೆಷನ್ :**

ಸದರಿ ಯೋಜನೆಯಡಿ ಸಂಘ ಸಂಸ್ಥೆಗಳಿಗೆ ನೇರವಾಗಿ ಅನುದಾನ ಬಿಡುಗಡೆ ಮಾಡಲಾಗುತ್ತಿದ್ದು, ಈ ಬಗ್ಗೆ ರಾಜ್ಯ ಸರ್ಕಾರಕ್ಕೆ ಮಾಹಿತಿಯನ್ನು ನೀಡುವಂತೆ ಮೌಲಾನಾ ಆಜಾದ್ ಪೌಂಡೇಶನ್‌ಗೆ ಪತ್ರ ಬರೆಯುವಂತೆ ತೀರ್ಮಾನಿಸಲಾಯಿತು.

5. **ರಾಜೀವ್ ಗಾಂಧಿ ಚೈತನ್ಯ ಯೋಜನೆ:**

ಸದರಿ ಯೋಜನೆಯಡಿ ಫಲಾನುಭವಿಗಳಿಗೆ ವಿವಿಧ ತರದ ತರಬೇತಿಗಳನ್ನು ನೀಡಿ, Credit linking ಮಾಡಲಾಗುತ್ತಿದ್ದು, ಒಟ್ಟಾರೆ ಗುರಿಯ ಶೇ.15%ನ್ನು ಅಲ್ಪಸಂಖ್ಯಾತ ಗುರಿಯೆಂದು ತೆಗೆದುಕೊಳ್ಳಲಾಗಿದೆ. ಕಳೆದ ವರ್ಷದ ಕೊನೆ ಕಂತಿನ ಅನುದಾನ ಬಿಡುಗಡೆ ವಿಳಂಬವಾಗಿರುವುದರಿಂದ ಗುರಿಯನ್ನು ಸಾಧಿಸಲು ಸಾಧ್ಯವಾಗಿರುವುದಿಲ್ಲ. ಪ್ರಸ್ತುತ ವರ್ಷದಲ್ಲಿ ಮೊದಲ ಕಂತಿನ ಅನುದಾನ ಬಿಡುಗಡೆಯಾಗಿದ್ದು, ಎಲ್ಲಾ ಜಿಲ್ಲೆಗಳಲ್ಲಿ ವಿವಿಧ ತರಬೇತಿಗಳಿಗೆ (Self Employment; Wage Employment, ಇತ್ಯಾದಿ) ಫಲಾನುಭವಿಗಳ ನೊಂದಣಿ ಕಾರ್ಯ ಜಾರಿಯಲ್ಲಿರುತ್ತದೆ. ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಈ ಬಗ್ಗೆ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿ ವರ್ಷದ 3ನೇ ತ್ರೈಮಾಸಿಕ ದೊಳಗಾಗಿ ತರಬೇತಿಗಳನ್ನು ಪೂರ್ಣಗೊಳಿಸಲು ಹಾಗೂ 4ನೇ ತ್ರೈಮಾಸಿಕದಲ್ಲಿ ಅಗತ್ಯ ಬ್ಯಾಂಕ್ ಲಿಂಕೇಜ್ ಕಾರ್ಯವನ್ನು ತೆಗೆದುಕೊಳ್ಳುವಂತೆ ಸೂಚಿಸಿದರು. ಅಲ್ಲದೇ ಜಿಲ್ಲಾ ಮಟ್ಟದ ಅಲ್ಪಸಂಖ್ಯಾತರ ಗುರಿಯನ್ನು ಸಂಬಂಧಿಸಿದ ಜಿಲ್ಲೆಯ ಅಲ್ಪಸಂಖ್ಯಾತ ಜನಸಂಖ್ಯೆಯನ್ನು ಆಧರಿಸಿ ನಿಗಧಿಪಡಿಸುವಂತೆ ತಿಳಿಸಿದರು.

6. **ಪೌರಾಡಳಿತ ನಿರ್ದೇಶನಾಲಯ:**

- NULM ಯೋಜನೆಯಡಿ 2016-17ನೇ ಸಾಲಿನಲ್ಲಿ ಅನುದಾನ ಬಿಡುಗಡೆಯಾಗದಿರುವ ಕಾರಣ ಹಾಗೂ ದಿ:01.10.2016 ರಂದು ಅನುಮೋದನೆ ವಿಳಂಭವಾಗಿ ದೊರೆತಿರುವ ಪ್ರಯುಕ್ತ ಪ್ರಗತಿ ಕುಂಠಿತವಾಗಿದ್ದು, ಪ್ರಸ್ತುತ ವರ್ಷದಲ್ಲಿ 2016-17ನ್ನು ಸಹ ಸೇರಿಸಿ ಒಟ್ಟಾರೆ ಸಾಧನೆ ಮಾಡಲಾಗುವುದೆಂದು ನಿರ್ದೇಶಕರು ಮಾನ್ಯ ಅಧ್ಯಕ್ಷರೊಂದಿಗೆ ಮನವಿ ಮಾಡಿಕೊಂಡರು. ಫಲಾನುಭವಿಗಳ ಆಯ್ಕೆ ಕಾರ್ಯವನ್ನು ಶೀಘ್ರದಲ್ಲಿ ಪೂರ್ಣಗೊಳಿಸಿ ವರ್ಷದ ಕೊನೆಯವರೆಗೂ ಕಾಯದೇ ಅನುದಾನ ಬಿಡುಗಡೆಯಾಗುತ್ತಿದ್ದಂತೆಯೇ ಪ್ರಗತಿಯನ್ನು ಸಾಧಿಸಲು ಮುಖ್ಯ ಕಾರ್ಯದರ್ಶಿ ರವರು ಸೂಚಿಸಿದರು.
- ನಿರ್ದೇಶಕರು ಪೌರಾಡಳಿತ ನಿರ್ದೇಶನಾಲಯ ರವರು SHGs ಕಾರ್ಯಕ್ರಮದ ಗುರಿಯನ್ನು ಸಾಧಿಸಲು ಸಾಧ್ಯವಾಗುತ್ತದೆ ಆದರೆ Area Level Federation ಹಾಗೂ Community Level Federation ರಲ್ಲಿ ಕೆಲವು ಸಮಸ್ಯೆಗಳಿದ್ದು, ಈ ಬಗ್ಗೆ ಕ್ರಮಕೈಗೊಳ್ಳಲಾಗುತ್ತಿದೆಂದು ತಿಳಿಸಿದರು.

7. **ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ:-**

NMDFC ಹಾಗೂ ಗಂಗಾ ಕಲ್ಯಾಣ ಯೋಜನೆಯನ್ನು ಹೊರತುಪಡಿಸಿ ಇನ್ನೊಳಿದ ಕಾರ್ಯಕ್ರಮಗಳಲ್ಲಿ ಪ್ರಗತಿ ಸಾಧಿಸಿದ್ದು, ಸದರಿ ಯೋಜನೆಯಡಿ ಪ್ರಗತಿಯನ್ನು ಚುರುಕುಗೊಳಿಸುವಂತೆ ಸೂಚಿಸಲಾಯಿತು.

8. **ರಾಜ್ಯ ಮತ್ತು ಕೇಂದ್ರ ಸೇವೆಗಳಿಗಾಗಿ ಅಲ್ಪಸಂಖ್ಯಾತರ ನೇಮಕಾತಿ:-**

- ಪತ್ರಗಳನ್ನು ಕಳುಹಿಸಿದ್ದ 30 ಇಲಾಖೆಗಳ ಪೈಕಿ 22 ಇಲಾಖೆಗಳು ಮಾಹಿತಿಯನ್ನು ಸಲ್ಲಿಸಿದ್ದು, 2016-17ನೇ ಸಾಲಿನಲ್ಲಿ ನೇಮಕಾತಿ ಕೈಗೊಂಡ ಇಲಾಖೆಗಳು ಅಲ್ಪಸಂಖ್ಯಾತರ ಮೀಸಲಾತಿಯಂತೆ ನೇಮಕಾತಿ ಮಾಡಿರುವುದಾಗಿ ಈ ಕುರಿತು ವಿವರಗಳನ್ನು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ನೀಡಿದರು.

- ಪೊಲೀಸ್ ಇಲಾಖೆಯಲ್ಲಿ ಅಲ್ಪಸಂಖ್ಯಾತ ಮೀಸಲಾತಿಯಂತೆ ಹುದ್ದೆಗಳನ್ನು ತುಂಬಲು ಸದರಿ ಸಮುದಾಯಗಳಲ್ಲಿ Awareness ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿ ರವರು ತಿಳಿಸಿದರು.
- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗುವ ಅಲ್ಪಸಂಖ್ಯಾತ ವಿದ್ಯಾರ್ಥಿಗಳಿಗೆ ಇಲಾಖಾ ವತಿಯಿಂದ ತರಬೇತಿ ನೀಡಲಾಗುತ್ತಿದ್ದು, ಇನ್ನಿತರೆ ವಿವಿಧ ಹುದ್ದೆಗಳಿಗೂ ಸಹ ಅಭ್ಯರ್ಥಿಗಳಿಗೆ ತರಬೇತಿ ಅವಶ್ಯವಿದ್ದು, ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಸೂಚಿಸಿದರು.
- ಸೇನಾ ನೇಮಕಾತಿಗೆ **(Army Recruitment)** ತರಬೇತಿ ನೀಡಲಾಗುತ್ತಿದೆ ಎಂದು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಸಭಾ ಅಧ್ಯಕ್ಷರ ಗಮನಕ್ಕೆ ತಂದರು.

9. **<u>ಕೋಮುಗಲಭೆಗಳ ತಡೆಗಟ್ಟುವಿಕೆ:</u>**

- ಅಪರ ಮುಖ್ಯ ಕಾರ್ಯದರ್ಶಿ, ಒಳಾಡಳಿತ ಇಲಾಖೆ ರವರು 'Prosecution for communal offences, Rehabilitation of Victims of communal Riots ಮತ್ತು No. of minorities under trials in communal & non-communal cases ಗಳ ಅಂಕಿ-ಅಂಶಗಳನ್ನು ನೀಡಿದರು.
- ಅಲ್ಪಸಂಖ್ಯಾತ ವಿಚಾರಣಾ ಬಂಧಿಗಳ ಸಂಖ್ಯೆಯು ಕಡಿಮೆ ನಮೂದಿಲಾಗಿರುತ್ತದೆಂದು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಅವಗಾಹನೆಗೆ ತಂದರು. ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಸದರಿ ಪ್ರಕರಣಗಳನ್ನು ನಿರ್ಧಿಷ್ಟ ಸಮಯದಲ್ಲಿ ಅಂತಿಮಗೊಳಿಸಿ ಕನಿಷ್ಟ ಪಕ್ಷ 03 ತಿಂಗಳೊಳಗಾಗಿ ವಿಲೇವಾರಿ ಮಾಡಬೇಕೆಂದು ಸೂಚನೆ ನೀಡಿದರು.
- ಕೋಮುಗಲಭೆ ಹಾಗೂ ಇನ್ನಿತರೆ ಗಲಭೆ ಪ್ರಕರಣಗಳಲ್ಲಿ ಪರಿಹಾರ ನೀಡುವ ಬಗ್ಗೆ ಒಂದೇ ಸರ್ಕಾರಿ ಆದೇಶವಿದ್ದು, ಇದನ್ನು disaggregate ಮಾಡಿ ನಿರ್ಧಿಷ್ಟ ಮಾನ ದಂಡಗಳನ್ನು ವಿಧಿಸುವುದು ಸೂಕ್ತವೆಂದು ಅಪರ ಮುಖ್ಯ ಕಾರ್ಯದರ್ಶಿಗಳು ಒಳಾಡಳಿತ ಇಲಾಖೆ ರವರು ಮಾನ್ಯ ಮುಖ್ಯ ಕಾರ್ಯದರ್ಶಿ ರವರಲ್ಲಿ ಮನವಿ ಮಾಡಿಕೊಂಡರು.
- ಕೋಮು ಹಾಗೂ ಇನ್ನಿತರ ಗಲಭೆಗಳಲ್ಲಿ ಸರ್ಕಾರದ ಆಸ್ತಿಗೆ ಹಾನಿ ಉಂಟಾದರೂ ಸಹ ಸರ್ಕಾರದಿಂದ ಪರಿಹಾರ ನೀಡುವಂತಹ ಪರಿಸ್ಥಿತಿ ಉಂಟಾಗುತ್ತದೆ ಎಂದು ಅಪರ ಮುಖ್ಯ ಕಾರ್ಯದರ್ಶಿ ರವರು ಸಭೆಯ ಗಮನಕ್ಕೆ ತಂದರು.
- ಮುಂದುವರೆದು ಸುಪ್ರಿಂ ಕೋರ್ಟಿನ ಆದೇಶದಂತೆ ಕೋಮುಗಲಭೆ ಹಾಗೂ ಇನ್ನಿತರೆ ಗಲಭೆಗಳಲ್ಲಿ ಇಡೀ ಸಮುದಾಯದ ಮೇಲೆ ದಂಡ ವಿಧಿಸಲು ಅವಕಾಶವಿದ್ದು, ಇದರಿಂದ ಜನ ಸಾಮಾನ್ಯರು ಮಾಬ್‌ಗಳಲ್ಲಿ (Mob violence) ಭಾಗವಹಿಸಲು ಹಿಂಜರುಗಿಸುತ್ತಾರೆಂದು ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಅಭಿಪ್ರಾಯಪಟ್ಟರು.

## III. <u>ಅಲ್ಪಸಂಖ್ಯಾತರಿಗೆ ಸಂಬಂಧಿಸಿದ ಇತರೆ ವಿಷಯಗಳು:-</u>

1. **<u>ಸರ್ಕಾರಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಸತಿ ಯೋಜನೆಗಳಿಗೆ ಅರ್ಹ ಅಲ್ಪಸಂಖ್ಯಾತ ಫಲಾನುಭವಿಗಳನ್ನು ಗುರುತಿಸುವ ಬಗ್ಗೆ:</u>**

ರಾಜೀವ್ ಗಾಂಧಿ ಗ್ರಾಮೀಣ ವಸತಿ ಯೋಜನೆ ಹಾಗೂ ಕರ್ನಾಟಕ ರಾಜ್ಯ ಅಭಿವೃದ್ಧಿ ಮಂಡಳಿ ಇಲಾಖೆಗಳಿಂದ ಅನುಷ್ಠಾನಗೊಳಿಸಲಾಗುತ್ತಿರುವ ವಸತಿ ಯೋಜನೆಗಳಲ್ಲಿ ಅರ್ಹ ಫಲಾನುಭವಿಗಳನ್ನು ಆಯ್ಕೆ ಮಾಡಿ ಮಾಹಿತಿಯನ್ನು ನೀಡುವಂತೆ ಸೂಚಿಸಲಾಯಿತು.

2. **ಸ್ವಯಂ ಉದ್ಯೋಗ ಮತ್ತು ವೇತನ ಉದ್ಯೋಗ:**

ಬ್ಯಾಂಕುಗಳಿಂದ ಮುದ್ರಾ ಯೋಜನೆ ಹಾಗೂ ಇತರೆ ಸರ್ಕಾರಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರಿಗೆ ಸಾಲವನ್ನು ನೀಡುವುದರಲ್ಲಿ ಪ್ರಗತಿಯನ್ನು ಚುರುಕುಗೊಳಿಸುವಂತೆ ತಿಳಿಸಲಾಯಿತು.

3. **ಸರ್ಕಾರದ ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮಗಳಡಿ ಅಲ್ಪಸಂಖ್ಯಾತ ಯುವಕ ಯುವತಿಯರಿಗೆ ಅಗತ್ಯತೆ ಅನುಗುಣವಾಗಿ ತರಬೇತಿ ನೀಡುವ ಬಗ್ಗೆ:**

ಕೌಶಲ್ಯ ಅಭಿವೃದ್ಧಿ ಕಾರ್ಯಕ್ರಮವನ್ನು ಪ್ರತ್ಯೇಕ ಇಲಾಖೆಯಿಂದ ಅನುಷ್ಠಾನಗೊಳಿಸುತ್ತಿದ್ದು, ಸದರಿ ಇಲಾಖೆಯ ಸಮಿತಿಯಲ್ಲಿ ಅಲ್ಪಸಂಖ್ಯಾತ ಇಲಾಖೆಯನ್ನು ಸದಸ್ಯರನ್ನಾಗಿ ನೇಮಿಸುವುದರಿಂದ ಪ್ರಯೋಜನವಾಗುವುದೆಂದು ಅಭಿಪ್ರಾಯಪಡಲಾಯಿತು.

4. **ಸರ್ಕಾರದ ವಿವಿಧ ಫಲಾನುಭವಿಗಳ ಆಧಾರಿತ ಕಾರ್ಯಕ್ರಮಗಳಡಿ ಶೇ.15% ಅಲ್ಪಸಂಖ್ಯಾತರಿಗಾಗಿ ಮೀಸಲಿರಿಸುವ ಬಗ್ಗೆ :**

ಎಲ್ಲಾ ಇಲಾಖೆಗಳ ಮುಖ್ಯಸ್ಥರು ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳಬೇಕಾಗಿ ತಿಳಿಸುತ್ತಾ ಅಲ್ಪಸಂಖ್ಯಾತ ಫಲಾನುಭವಿಗಳ ವಿವರಗಳನ್ನು ವೆಬ್‌ಸೈಟ್‌ನಲ್ಲಿ ಅಳವಡಿಸಲು ಸೂಚಿಸಿದರು.

5. **MSDP - ಬಹುವಲಯ ಕಾರ್ಯಕ್ರಮ ಯೋಜನಾ:**

ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇನಾಲಯ ರವರು ಉತ್ತರಿಸುತ್ತ ಸದರಿ ಯೋಜನೆಯು ಕೇಂದ್ರ ಸರ್ಕಾರದ ಕಾರ್ಯಕ್ರಮವಾಗಿದ್ದು, ಪ್ರಸ್ತುತ ಕರ್ನಾಟಕ ರಾಜ್ಯದಲ್ಲಿ 3 ಬ್ಲಾಕ್ ಹಾಗು 7 ನಗರಗಳಲ್ಲಿ ಅನುಷ್ಠಾನಗೊಳಿಸಲಾಗುತ್ತಿದೆಂದು ಹಾಗೂ ಕಳೆದ ವರ್ಷ ರೂ.150 ಕೋಟಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ ಎಂದು ಹೇಳಿದರು. ಸದರಿ ಕಾರ್ಯಕ್ರಮವನ್ನು ಆರ್ಥಿಕ ಹಾಗೂ ಸಾಮಾಜಿಕವಾಗಿ ಹಿಂದುಳಿದ ಅಲ್ಪಸಂಖ್ಯಾತರು ಹೆಚ್ಚಾಗಿ ವಾಸಿಸುವಂತಹ ಪ್ರದೇಶಗಳನ್ನು ಆಯ್ಕೆ ಮಾಡಲಾಗಿರುತ್ತದೆಂದು ತಿಳಿಸಿದರು.

ಎಂ.ಎಸ್.ಡಿ.ಪಿ ಯೋಜನೆಯು ಆರೋಗ್ಯ, ಶಿಕ್ಷಣ, ಕೌಶಲ್ಯ ಅಭಿವೃದ್ಧಿ ಹಾಗೂ ವಸತಿಯನ್ನು ಒಳಗೊಂಡಿದ್ದು, ಮೂಲಭೂತ ಸೌಕರ್ಯ ಹಾಗೂ ಕೌಶಲ್ಯ ಅಭಿವೃದ್ಧಿಗೆ ಪ್ರಾಮುಖ್ಯತೆ ನೀಡಲಾಗಿದೆ ಎಂದು ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ತಿಳಿಸಿದರು.

ಮುಖ್ಯ ಕಾರ್ಯದರ್ಶಿ ರವರು ಕಟ್ಟಡ ನಿರ್ಮಾಣದ ಕಾರ್ಯಕ್ರಮಗಳನ್ನು ಅಗತ್ಯವಿದ್ದರೇ ಮಾತ್ರ ತೆಗೆದುಕೊಳ್ಳುವುದು ಹಾಗೂ ಕೌಶಲ್ಯ ಅಭಿವೃದ್ಧಿ, ಉದ್ಯೋಗ ಕಲ್ಪಿಸುವಿಕೆಗಾಗಿ ಅನುದಾನ ಬಳಸುವುದರಿಂದ ಅಲ್ಪಸಂಖ್ಯಾತ ಯುವಕ ಯುವತಿಯರಿಗೆ ತರಬೇತಿಯನ್ನು ಕಲ್ಪಿಸಿ ಉದ್ಯಮಗಳಲ್ಲಿ ಹಾಗೂ ಕಾರ್ಖಾನೆಗಳಲ್ಲಿ ವೃತ್ತಿ ಸಿಗುವಂತೆ ಮಾಡಬಹುದು ಎಂದು ಅಭಿಪ್ರಾಯಪಟ್ಟರು. ನಿರ್ದೇಶಕರು, ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇನಾಲಯ ರವರು ಪ್ರಸ್ತುತ ವರ್ಷಕ್ಕೆ ರೂ.60.00 ಕೋಟಿಗಳ ಕ್ರಿಯಾ ಯೋಜನೆಯನ್ನು ಸಿದ್ದಪಡಿಸಿದ್ದು ಮೂರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಚಿತ್ತಾಪೂರ, ರಾಯಚೂರು (ಸಿಂಧನೂರು) ನಲ್ಲಿ ನಿರ್ಮಾಣಮಾಡಲಾಗುವುದೆಂದು ಹೇಳಿದರು.

## IV.ಅಧಿಕಾರೇತರ ಸಂಘ ಸಂಸ್ಥೆಗಳ ಪ್ರತಿನಿಧಿಗಳು ಪ್ರಸ್ತಾಪಿಸಲಾದ ವಿಷಯಗಳು:

**ಶ್ರೀ ಜಿಯಾಉಲ್ಲಾ ಖಾನ್, ಸದಸ್ಯರು:-** Federation of Masjid, Madrasa and Wakf Institutions,

**(a) 2016-17ನೇ ಸಾಲಿನ ವಿದ್ಯಾರ್ಥಿ ವೇತನವನ್ನು ಮಕ್ಕಳಿಗೆ ನೀಡದೇ ಇರುವ ಬಗ್ಗೆ :-**

ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಉತ್ತರಿಸುತ್ತಾ 2016-17ನೇ ಸಾಲಿನಲ್ಲಿ ವಿದ್ಯಾರ್ಥಿ ವೇತನ ನೀಡಲಾಗಿದ್ದು, ಒಟ್ಟು 13.95 ಲಕ್ಷ ವಿದ್ಯಾರ್ಥಿಗಳ ಪೈಕಿ ಕೇಂದ್ರ ಸರ್ಕಾರವು 4 ಲಕ್ಷ ವಿದ್ಯಾರ್ಥಿಗಳಿಗೆ ಮಾತ್ರ ವಿದ್ಯಾರ್ಥಿ ವೇತನವನ್ನು ಮಂಜೂರು ಮಾಡಿರುತ್ತದೆ. ಅದರಲ್ಲಿ ಈಗಾಗಲೇ 3 ಲಕ್ಷ ಮಕ್ಕಳಿಗೆ ವಿದ್ಯಾರ್ಥಿ ವೇತನ ಬಿಡುಗಡೆಯಾಗಿದ್ದು, ಉಳಿದ 1 ಲಕ್ಷ ವಿದ್ಯಾರ್ಥಿಗಳಿಗೆ ಸದ್ಯದಲ್ಲೇ ಬಿಡುಗಡೆ ಮಾಡಲಾಗುವುದೆಂದು ಕೇಂದ್ರ ಸರ್ಕಾರವು ಆಶ್ವಾಸನೆ

ನೀಡಿರುವುದಾಗಿ ತಿಳಿಸಿದರು. ಸದರಿ ವಿಷಯವನ್ನು ರೆಕಾರ್ಡ್ ಮಾಡಿ, ಅನುಸರಣಾ ಕ್ರಮವನ್ನು ಕೈಗೊಳ್ಳಲು ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು. ಆದಾಗ್ಯೂ ವಿದ್ಯಾರ್ಥಿ ವೇತನ ಬಿಡುಗಡೆಯಾಗದೇ ಇರುವ ಮಕ್ಕಳಿಂದ ಅರ್ಜಿಗಳನ್ನು ಪಡೆದು ಇವರಿಗೆ ಪರಿಹಾರ ನೀಡಲು ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಿದರು. ಒಟ್ಟಾರೆ ಸ್ವೀಕೃತ್ವಾದ ಅರ್ಜಿಗಳ ಪೈಕಿ ತಿರಸ್ಕರಿಸಲಾದ 53 ಸಾವಿರ ಮಕ್ಕಳ ಅರ್ಜಿಗಳ ಮಾಹಿತಿಯನ್ನು ಎಸ್.ಎಂ.ಎಸ್ ಅಲರ್ಟ್ (sms alert) ಮೂಲಕ ಮಕ್ಕಳಿಗೆ ಮಾಹಿತಿಯನ್ನು ನೀಡಲಾಗಿದೆ ಎಂದು ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ತಿಳಿಸಿದರು. ಯಾವ ಕಾರಣಕ್ಕಾಗಿ ಆರ್ಜಿಗಳು ತಿರಸ್ಕರಿಸಲಾಗಿದೆ ಎಂಬ ಮಾಹಿತಿಯು ಸಹ ವಿದ್ಯಾರ್ಥಿಗಳಿಗೆ ನೀಡುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು. ಅಲ್ಲದೇ ವಿದ್ಯಾರ್ಥಿ ವೇತನದ ಮಾಹಿತಿಯನ್ನು ಎಲ್ಲಾರಿಗೂ ತಲುಪುವ ಉದ್ದೇಶದಿಂದ Awareness ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಸೂಚಿಸಿದರು.

(a) **ಮದರಸಾಗಳ ಆಧುನೀಕರಣ:** ಮಾನ್ಯ ಸದಸ್ಯರು ಸದರಿ ಕಾರ್ಯಕ್ರಮಕ್ಕೆ 50 ಕೋಟಿ ಮಂಜೂರಾಗಿದ್ದರೂ ಒಂದೇ ಒಂದು ಮದರಸಾಗೆ ಅನುದಾನ ಬಿಡುಗಡೆಯಾಗಿರುವುದಿಲ್ಲವೆಂದು ಸಭೆಯ ಗಮನಕ್ಕೆ ತಂದರು. ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಈ ಬಗ್ಗೆ ಸ್ಪಷ್ಟೀಕರಣ ನೀಡುತ್ತಾ ಮಾನ್ಯ ಇಲಾಖಾ ಮಂತ್ರಿಗಳೊಂದಿಗೆ ಚರ್ಚಿಸಲಾಗುವುದೆಂದು ಹೇಳಿದರು. ಸದರಿ ಕಾರ್ಯಕ್ರಮದ ಬಗ್ಗೆ ಇರುವಂತಹ ವ್ಯತ್ಯಾಸಗಳನ್ನು ಕೂಡಲೇ ಅಂತಿಮಗೊಳಿಸಿ ದಿ:15.08.2017 ರೊಳಗಾಗಿ ಅಗತ್ಯ ಅನುಮೋದನೆ ಪಡೆದು ಮದರಸಾಗಳಿಗೆ ಅನುದಾನ ಬಿಡುಗಡೆ ಮಾಡುವಂತೆ ಹಾಗೂ ಇದರಿಂದ ಮದರಸಾಗಳು ಪ್ರಸ್ತುತ ವರ್ಷದಲ್ಲಿ ವಿದ್ಯಾಭ್ಯಾಸವನ್ನು ಮುಂದುವರೆಸಲು ಅನುಕೂಲವಾಗುವುದೆಂದು ಮಾನ್ಯ ಮುಖ್ಯ ಕಾರ್ಯದರ್ಶಿಗಳು ತಿಳಿಸಿದರು.

(b) **ಜಿಲ್ಲಾ ಮಟ್ಟದಲ್ಲಿ ಪ್ರಧಾನ ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮಗಳಡಿ ತ್ರೈಮಾಸಿಕ ಸಭೆಗಳನ್ನು ಜಿಲ್ಲಾಧಿಕಾರಿಗಳು ಕ್ರಮವಗಿ ನಡೆಸದೇ ಇರುವ ಬಗ್ಗೆ:**
ಈ ಬಗ್ಗೆ ಜಿಲ್ಲಾ ಮಟ್ಟದ ಸಭೆಗಳ ಮಾಹಿತಿಯನ್ನು ಪರಿಶೀಲಿಸಿ ಸಭೆಗಳನ್ನು ನಡಸದೇ ಇರುವಂತಹ ಜಿಲ್ಲೆಗಳಿಗೆ (ದಕ್ಷಿಣ ಕನ್ನಡ, ಬಾಗಲಕೋಟೆ, ಬೆಂಗಳೂರು ನಗರ, ಹಾಸನ, ರಾಮನಗರ, ಬೀದರ್, ಚಾಮರಾಜನಗರ) ಅರೇ ಸರ್ಕಾರಿ ಪತ್ರಗಳನ್ನು ಬರೆದು ಮಾಹಿತಿಯನ್ನು ಪಡೆಯುವುದು ಹಾಗೂ ಎಲ್ಲಾ ಜಿಲ್ಲೆಗಳಿಂದ ಸಮಿತಿ ಸಭೆಯ ನಡವಳಿಗಳನ್ನು ಅಂತರ್ಜಾಲದಲ್ಲಿ upload ಮಾಡಲು ತಿಳಿಸುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚನೆ ನೀಡಿದರು.

(c) **ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಹದಗೆಟ್ಟಿದ್ದು, ಅಲ್ಪಸಂಖ್ಯಾತರಲ್ಲಿ ಭಯದ ವಾತಾವರಣ ಸೃಷ್ಠಿಯಾಗಿರುತ್ತದೆ; ಈ ಬಗ್ಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸದಸ್ಯರು ಮಾನ್ಯ ಮುಖ್ಯ ಕಾರ್ಯದರ್ಶಿಗಳಲ್ಲಿ ಮನವಿ ಮಾಡಿದರು.**
ಕೇವಲ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಇತ್ತೀಚಗೆ ಘಟನೆಗಳು ಸಂಭವಿಸಿದ್ದು, ಕರ್ನಾಟಕ ರಾಜ್ಯವು ಒಂದು ಶಾಂತಿಯುತ ರಾಜ್ಯವೆಂದು ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಹೇಳಿದರು. ಆದಾಗ್ಯೂ ಪರಿಸಿತ್ಥಿ ಕೈಯಿಂದ ಹೊರಹೋಗದಂತೆ ನೋಡಿಕೊಳ್ಳಲು ಜಿಲ್ಲಾ ಪೋಲೀಸ್ ಅಧೀಕ್ಷಕರು ಹಾಗೂ ಜಿಲ್ಲಾಧಿಕಾರಿಗಳಿಗೆ ನಿರ್ದೇಶನ ನೀಡುವಂತೆ ಅಪರ ಮುಖ್ಯ ಕಾರ್ಯದರ್ಶಿ ಒಳಾಡಳಿತ ಇಲಾಖೆ ರವರಿಗೆ ನಿರ್ದೇಶನ ನೀಡಿದರು.

<u>ಶ್ರೀ ಅಸ್ಗರ್ ಚುಲ್‌ಬುಲ್, ಗುಲ್ಬರ್ಗಾ – ಸದಸ್ಯರು</u>

(a) ಗುಲ್ಬರ್ಗಾ ಉತ್ತರ ವಿಧಾನಸಭಾ ಕ್ಷೇತ್ರದಲ್ಲಿ ಶೇ.60% ಗಿಂತ ಹೆಚ್ಚಾಗಿ ಹಾಗೂ ಗುಲ್ಬರ್ಗಾ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಶೇ.35% ಗಿಂತ ಹೆಚ್ಚಾಗಿ ಅಲ್ಪಸಂಖ್ಯಾತ ಜನಸಂಖ್ಯೆ ವಾಸ ಮಾಡುತ್ತಿದ್ದು, ಸದರಿ ಬ್ಲಾಕ್‌ಗಳನ್ನು ಎಂ.ಎಸ್.ಡಿ.ಪಿ ಯೋಜನೆಯಡಿ ತೆಗೆದುಕೊಳ್ಳುವ ಬಗ್ಗೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ಹಿಂದಿನ ಸಭೆಯಲ್ಲಿ ತಿಳಿಸಲಾಗಿದ್ದು, ಈ ಬಗ್ಗೆ ಯಾವುದೇ ಕ್ರಮ ಕೈಗೊಂಡಿರುವುದಿಲ್ಲ ಎಂದು ಮಾನ್ಯ ಮುಖ್ಯ ಕಾರ್ಯದರ್ಶಿ ರವರ ಗಮನಕ್ಕೆ ತಂದರು. ಜನಗಣತಿ ಮಾಹಿತಿಯನ್ನು ಆಧಾರಿಸಿ ಬ್ಲಾಕ್/ನಗರಗಳನ್ನು ಆಯ್ಕೆ ಮಾಡಲಾಗಿದ್ದು, ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಪರಿಶೀಲಿಸಿ ತಾಲ್ಲೂಕುಗಳಲ್ಲಿ ಅಲ್ಪಸಂಖ್ಯಾತರು ಹೆಚ್ಚಾಗಿದ್ದ ಪಕ್ಷದಲ್ಲಿ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬಹುದೆಂದು ತಿಳಿಸಿದರು.

(b) ಎಂ.ಎಸ್.ಡಿ.ಪಿ ಯೋಜನೆಯ ಬಗ್ಗೆ ಚರ್ಚಿಸುತ್ತಾ ನಿರ್ದೇಶಕರು, ಪೌರಾಡಳಿತ ನಿರ್ದೇಶನಾಲಯ ರವರು ಸದರಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳು ಹಾಗೂ ANM ಉಪ ಕೇಂದ್ರಗಳನ್ನು ನಿರ್ಮಿಸುವುದು ಅವಶ್ಯಕವೆಂದು ಹೇಳಿ ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಈ ಹಿಂದೆ ಸದರಿ ಕಾಮಾಗಾರಿಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಸ್ಪಷ್ಟಪಡಿಸಿದರು. ಮಾನ್ಯ ಮುಖ್ಯ ಕಾರ್ಯದರ್ಶಿಗಳು ಮಾತ್ರ ಇಲಾಖೆಗಳಿಂದ ಮೂಲಸೌಕರ್ಯಗಳನ್ನು ಒದಗಿಸಲು ಸಾಧ್ಯವಿಲ್ಲದ ಪಕ್ಷದಲ್ಲಿ ಎಂ.ಎಸ್.ಡಿ.ಪಿ ಯೋಜನೆಯಡಿ ದೊಡ್ಡ ದೊಡ್ಡ ಕಾಮಾಗಾರಿಗಳ ಬದಲು ಗ್ಯಾಪ್ ಫಿಲ್ಲಿಂಗ್ (gap filling approach) ವಿಧಾನವನ್ನು ಅನುಸರಿಸಬೇಕಾಗಿದ್ದು, ಹೊಸ ಅಂಗನವಾಡಿ ಕೇಂದ್ರ ನಿರ್ಮಾಣ, ಶಿಥಿಲಗೊಂಡಿರುವ ಶಾಲೆಗಳ ದುರಸ್ತಿ ಹಾಗೂ ಕೌಶಲ್ಯ ಅಭಿವೃದ್ಧಿ ಸೇರಿದಂತೆ ಒಟ್ಟು ರೂ. 100 ಕೋಟಿಗಳ ಪ್ರಸ್ತಾವನೆಯನ್ನು ಸಿದ್ಧಪಡಿಸುವಂತೆ ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ರವರಿಗೆ ತಿಳಿಸಿದರು. ಹಾಗೂ ಅಗತ್ಯ ನಿವೇಶನವನ್ನು ಲಭ್ಯಪಡಿಸಲು ಜಿಲ್ಲಾಡಳಿತಕ್ಕೆ ಸ್ಪಷ್ಟ ನಿರ್ದೇಶನಗಳನ್ನು ನೀಡಲು ತಿಳಿಸಿದರು.

(c) **ಮದರಸಾಗಳ ಆಧುನೀಕರಣ ಹಾಗೂ ಎಸ್.ಪಿ.ಕ್ಯೂ.ಇ.ಎಂ. :** ಯೋಜನೆಗಳಡಿ ಉರ್ದು ದಿನಪತ್ರಿಕೆಗಳಲ್ಲಿ ತರ್ಜುಮೆ ಮಾಡದೇ ಜಾಹಿರಾತುಗಳನ್ನು ಕನ್ನಡದಲ್ಲೇ ಪ್ರಕಟಿಸಲಾಗುತ್ತಿದ್ದು, ಇದರಿಂದ ಜನಸಾಮಾನ್ಯರಿಗೆ ಸಮಸ್ಯೆ ಉಂಟಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ವಿಷಯವನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಅಲ್ಪಸಂಖ್ಯಾತ ನಿರ್ದೇಶನಾಲಯ ಮಾಹಿತಿ ಕೇಂದ್ರಗಳಲ್ಲಿ ಪರಿಶೀಲಿಸಿ ಎಲ್ಲಾ ಜಾಹೀರಾತುಗಳನ್ನು ಉರ್ದು ಭಾಷೆಯಲ್ಲಿ ತರ್ಜುಮೆ ಮಾಡಿ ಪ್ರಕಟಿಸುವಂತೆ ನಿರ್ದೇಶನ ನೀಡಿದರು.

(d) Remedial Coaching ಯೋಜನೆಯಡಿ ಉರ್ದು ಶಾಲೆಗಳ ಮಕ್ಕಳಿಗೆ ಕನ್ನಡ ಹಾಗೂ ಕಂಪ್ಯೂಟರ್ ತರಬೇತಿಗಳನ್ನು ನಡೆಸುವ ಬಗ್ಗೆ ಹಿಂದಿನ ಸಭೆಯಲ್ಲಿ ಪ್ರಸ್ತಾಪಿಸಲಾಗಿರುತ್ತದೆ ಎಂದು ಸದಸ್ಯರು ಹೇಳಿದರು. ಸದರಿ ಯೋಜನೆಯು ಅಲ್ಪಸಂಖ್ಯಾತ ಇಲಾಖೆಯಿಂದ ಶಿಕ್ಷಣ ಇಲಾಖೆಗೆ ವರ್ಗಾಯಿಸಲಾಗಿರುವುದರಿಂದ ಇತರೇ ಎಲ್ಲಾ ವಿಷಯಗಳೊಂದಿಗೆ ಕನ್ನಡ ಹಾಗೂ ಕಂಪ್ಯೂಟರ್ ತರಬೇತಿಗಳನ್ನು ಉರ್ದು ಶಾಲೆಗಳಲ್ಲಿ ನೀಡಲು ಅಗತ್ಯ ಕ್ರಮ ಕೈಗೊಳ್ಳುವಂತೆ ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ ರವರಿಗೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ನಿರ್ದೇಶನ ನೀಡಿದರು.

**ಶ್ರೀ ಜಾಫರ್ ಪಟೇಲ್ ಅಲಿ, ರಾಯಚೂರು – ಸದಸ್ಯರು :** 2013-14ನೇ ಸಾಲಿನಲ್ಲಿ ರೂ 10 ಕೋಟಿಯನ್ನು ಖರ್ಚು ಮಾಡಿ ರಾಯಚೂರುನಲ್ಲಿ ಒಂದು ಪ್ರಾಥಮಿಕ ಶಾಲೆ, 6 ಪ್ರೌಢಶಾಲೆ, ಎರಡು ಪದವಿ ಕಾಲೇಜುಗಳು ನಿರ್ಮಾಣವಾಗಿದ್ದು, ಸದರಿ ಕಟ್ಟಡಗಳು ಬಳಕೆಯಾಗುತ್ತಿಲ್ಲವೆಂದು ಸಭಾ ಅಧ್ಯಕ್ಷರ ಗಮನಕ್ಕೆ ತಂದರು. ನಿರ್ದೇಶಕರು ಅಲ್ಪಸಂಖ್ಯಾತರ ನಿರ್ದೇಶನಾಲಯ ರವರು ಇದರ ಬಗ್ಗೆ ಎಂ.ಎಸ್.ಡಿ.ಪಿ ಯೋಜನೆಯಡಿ ಶಾಲಾ ಕಟ್ಟಡಗಳಲ್ಲಿ ಹೊಸ ಕೊಠಡಿಗಳನ್ನು ನಿರ್ಮಿಸಲಾಗುತ್ತಿದ್ದು, ಈ ಬಗ್ಗೆ ಪರಿಶೀಲಿಸಲಾಗುವುದೆಂದು ತಿಳಿಸಿದರು,.

ಶಿಕ್ಷಣ ಇಲಾಖೆಯು ಸದರಿ ಕಟ್ಟಡಗಳನ್ನು ಬಳಸಿಕೊಳ್ಳಲು ಕ್ರಮಕೈಗೊಳ್ಳುವಮತೆ ಸೂಚಿಸುತ್ತಾ ತಪ್ಪಿದ್ದಲ್ಲಿ ಸದರಿ ಹೊಸ ಕಟ್ಟಡದ ಆವರಣದಲ್ಲಿ ಅಂಗನವಾಡಿ ಕೇಂದ್ರಗಳನ್ನು ನಡೆಸಲು ಉಪಯೋಗಿಸಿಕೊಳ್ಳುವಂತೆ ಮಾನ್ಯ ಮುಖ್ಯ ಕಾರ್ಯದರ್ಶಿಗಳು ಸೂಚಿಸಿದರು.

ಜಿಲ್ಲಾ ಮಟ್ಟದಲ್ಲಿ ಇರುವಂತಹ ಅಲ್ಪಸಂಖ್ಯಾತರ ಇಲಾಖೆಯ ಅಧಿಕಾರಿಗಳು ಸಾರ್ವಜನಿಕರಿಗೆ ಸರಿಯಾದ ಮಾಹಿತಿಯನ್ನು ನೀಡುತ್ತಿಲ್ಲವೆಂದು ಸದಸ್ಯರು ತಿಳಿಸಿದರು. ಮುಂದಿನ ತ್ರೈಮಾಸಿಕ ಸಭೆಯಲ್ಲಿ ನೋಡಲ್ ಅಧಿಕಾರಿಗಳು ಕೈಗೊಳ್ಳಬೇಕಾದ ಚಟುವಟಿಕೆಗಳ ಪಟ್ಟಿಯನ್ನು ಸಲ್ಲಿಸಲು ಮಾನ್ಯ ಮುಖ್ಯ ಕಾರ್ಯದರ್ಶಿ ರವರು ತಿಳಿಸಿದರು. ಅಲ್ಲದೇ ಸಾರ್ವಜನಿಕರೊಂದಿಗೆ ಯಾವ ರೀತಿ ವ್ಯವಹರಿಸಬೇಕೆಂದು ಹಾಗೂ ಸ್ವೀಕರಿಸುವ ದೂರುಗಳ ಬಗ್ಗೆ ಪರಿಹಾರ ನೀಡುವ ಬಗ್ಗೆ ವಿಭಾಗಿಯ ಮಟ್ಟದ ತರಬೇತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ನಿರ್ದೇಶನ ನೀಡಿದರು.

**ಶ್ರೀಮತಿ ಆಬಿಧಾಬಿ ಇಸ್ಮಾಯಿಲ್ ನದಾಫ್, ಸದಸ್ಯರು:** ಪಿ.ಎಂ.ಎ.ಐ ವಸತಿ ಯೋಜನೆಯಡಿ ಹಾವೇರಿ ಜಿಲ್ಲೆಯಲ್ಲಿ 2011 ರಂದು ಸಮೀಕ್ಷೆ ಕೈಗೊಂಡಿದ್ದು, ಅಲ್ಪಸಂಖ್ಯಾತರ ಹಲವಾರು ಮನೆಗಳನ್ನು ಕೈಬಿಡಲಾಗಿದ್ದು, ಪುನಃ ಸಮೀಕ್ಷೆ ನಡೆಸಬೇಕೆಂದು ಕೋರಿಕೊಂಡರು. ಸದರಿ ಯೋಜನೆಯಡಿ ಈಗಾಗಲೇ

ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದ್ದು, ಮಾಹಿತಿಯ ಬದಲಾವಣೆಗೆ ಅವಕಾಶ ನೀಡಲಾಗುತ್ತಿಲ್ಲವೆಂದು ಇಲಾಖಾಧಿಕಾರಿಗಳು ತಿಳಿಸಿದರು. ಆದಾಗ್ಯೂ ಪುನಃ ಸಮೀಕ್ಷೆ ಮಾಡಲು ಸಾಧ್ಯವಿಲ್ಲದಿರುವುದರಿಂದ ಕೈ ಬಿಡಲಾದ ಮನೆಗಳ ಮಾಹಿತಿಯನ್ನು ನೀಡಿದ್ದಲ್ಲಿ ಸೇರಿಸಲಾಗುವುದೆಂದು ಇಲಾಖಾ ಪ್ರಧಾನ ಕಾರ್ಯದರ್ಶಿಗಳು ತಿಳಿಸಿದರು.

**ಶ್ರೀ. ಎಂ.ಬಿ. ಬಡಬಡೆ Consortium of Minorities Association, Belgaum -ಸದಸ್ಯರು:** ಇತ್ತೀಚಗೆ ದಿನಪತ್ರಿಕೆಯಲ್ಲಿ ಬಂದ ಮಾಹಿತಿಯಂತೆ ರಾಜ್ಯದ ಮಸೀದಿಗಳ ಸಮೀಕ್ಷೆಯನ್ನು ಕೈಗೊಳ್ಳಲಾಗುತ್ತಿದೆ ಎಂದು ಅಧ್ಯಕ್ಷರ ಗಮನಕ್ಕೆ ತರುತ್ತಾ ಈ ಬಗ್ಗೆ ಸರ್ಕಾರದಿಂದ ನಿರ್ದೇಶನ ನೀಡಲಾಗಿದಿಯೇ ಎಂದು ವಿಚಾರಿಸಿದರು. ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು DG Intelligence ರವರ ಕಛೇರಿಯಿಂದ ಈ ಬಗ್ಗೆ ಸುತ್ತೋಲೆ ಹೊರಡಿಸಲಾಗಿದ್ದು, ಮುಸ್ಲಿಂ ಸಮುದಾಯದ ಧಾರ್ಮಿಕ ಸ್ಥಳಗಳಿಗೆ ಮಾತ್ರ ಸಮೀಕ್ಷೆ ಸೀಮಿತವಾಗಿದ್ದು, ಈ ಬಗ್ಗೆ ಅಪರ ಮುಖ್ಯ ಕಾರ್ಯದರ್ಶಿಗಳು ಹಾಗೂ DG Intelligence ರವರೊಂದಿಗೆ ಮಾತನಾಡಿರುವುದಾಗಿ ತಿಳಿಸುತ್ತಾ, ಸದರಿ ಸುತ್ತೋಲೆಯನ್ನು ಹಿಂಪಡೆಯಬೇಕೆಂದು ಕೋರಿದರು.

ಮಾನ್ಯ ಮುಖ್ಯ ಕಾರ್ಯದರ್ಶಿ ರವರು ಮಾತನಾಡುತ್ತಾ DG Intelligence ರವರ ಕಛೇರಿಯಿಂದ ಸುತ್ತೋಲೆ ಹೊರಡಿಸಿರುವುದು ಸೂಕ್ತವಲ್ಲವೆಂದು ಅಭಿಪ್ರಾಯ ಪಡುತ್ತಾ ಈ ಬಗ್ಗೆ ಅಗತ್ಯ ಕ್ರಮಕೈಗೊಳ್ಳುವಂತೆ ತಿಳಿಸಿದರು.

ಅಂತಿಮವಾಗಿ ಕಾರ್ಯದರ್ಶಿಗಳು, ಅಲ್ಪಸಂಖ್ಯಾತರ ಕಲ್ಯಾಣ, ಹಜ್ ಮತ್ತು ವಕ್ಫ್ ಇಲಾಖೆ ರವರು ಸಭಾ ಅಧ್ಯಕ್ಷರೊಂದಿಗೆ ಎಲ್ಲಾರಿಗೂ ವಂದಿಸುತ್ತಾ ಇಂದು ಚರ್ಚಿಸಲಾದ ವಿಷಯಗಳ/ತೀರ್ಮಾನಗಳ ಬಗ್ಗೆ ಅನುಸರಣಾ ಕ್ರಮ ಹಾಗೂ Action Taken Reportನ್ನು ಸಕಾಲದಲ್ಲಿ ಸಲ್ಲಿಸಬೇಕೆಂದು ಕೋರಿಕೊಂಡರು.

ಎಸ್.ಸಿ. ಖುಂಟಿಆ

**(ಡಾ।। ಸುಭಾಷ್ ಚಂದ್ರ ಖುಂಟಿಆ)**
ಕರ್ನಾಟಕ ಸರ್ಕಾರದ ಮುಖ್ಯ ಕಾರ್ಯದರ್ಶಿಗಳು
ಮತ್ತು ಅಧ್ಯಕ್ಷರು, ರಾಜ್ಯ ಮಟ್ಟದ ಪ್ರಧಾನ
ಮಂತ್ರಿಗಳ ಹೊಸ 15 ಅಂಶ ಕಾರ್ಯಕ್ರಮದ
ಪ್ರಗತಿ ಪರಿಶೀಲನಾ ಸಮಿತಿ